# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1)ಪಿಆರ್/394/2022–23

ಮುಖ್ಯ ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 22-06-2022

## ಸುತ್ತೋಲೆ

ವಿಷಯ: ಆರ್ಥಿಕ ವಿಷಯದ ಕಡತಗಳು ಹೊರಪಡಿಸಿ ವಿಶೇಷ ಆಯುಕ್ತರುಗಳಿಗೆ ಅಧಿಕಾರಿ ಪ್ರತ್ಯಾಯೋಜನೆ ಮಾಡುವ ಬಗ್ಗೆ.

* * * * *

ಮೇಲ್ಕಂಡ ವಿಷಯದಲ್ಲಿ ತಮ್ಮ ವಿಷಯ ವ್ಯಾಪ್ತಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಲು ಕೋರಿದೆ.

1) ಅಂತಿಮ ತೀರ್ಮಾನ ಅಥವಾ ಅನುಮೋದನೆ ಬೇಕಾದ ಕಡತಗಳನ್ನು ಮಾತ್ರ ವಿಶೇಷ ಆಯುಕ್ತರು ಮುಖ್ಯ ಆಯುಕ್ತರಿಗೆ ಮಂಡಿಸಬೇಕು.
2) ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಸರ್ಕಾರದ ಬೇರೆ ಇಲಾಖೆಗಳು ನಿಗಮ ಮಂಡಳಿಯ ಜೊತೆ ವ್ಯವಹರಿಸಬೇಕಾದ ಸಂದರ್ಭದಲ್ಲಿ ವಿಶೇಷ ಆಯುಕ್ತರು ಮುಖ್ಯ ಆಯುಕ್ತರ ಮುಖಾಂತರ ಸಂವಹನ ನಡೆಸಬೇಕು.
3) ಬಿಬಿಎಂಪಿಯ ಇತರೇ ದಾಖಲೆಗಳೊಂದಿಗೆ ಯಾವುದಾದರೂ ಸ್ಪಷ್ಟೀಕರಣ ಬೇಕಾದ ಸಂದರ್ಭದಲ್ಲಿ ವಿಶೇಷ ಆಯುಕ್ತರು ನೇರವಾಗಿ ಸಂಬಂಧಿತ ವಿಶೇಷ ಆಯುಕ್ತರೊಂದಿಗೆ ಪತ್ರ / ಕಡತ ವ್ಯವಹಾರ ನಡೆಸಬೇಕು.
4) ವಿಶೇಷ ಆಯುಕ್ತರು, ಮುಖ್ಯ ಆಯುಕ್ತರೊಂದಿಗೆ ಅನುಮೋದನೆ ಕೋರುವ ಸಂದರ್ಭದಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕಡತದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು.
5) ಮುಖ್ಯ ಆಯುಕ್ತರಿಂದ ಸ್ಪಷ್ಟೀಕರಣ ಕೋರುವ ಸಂದರ್ಭದಲ್ಲಿ ವಿಶೇಷ ಆಯುಕ್ತರು ಸಮಸ್ಯೆಯ ಕುರಿತು ವಿವರವಾದ ಮಾಹಿತಿ ನೀಡುವುದರ ಜೊತೆಗೆ ಯಾವ ಅಂಶದ ಕುರಿತು ಸ್ಪಷ್ಟೀಕರಣ ಬೇಕಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.
6) ಎಲ್ಲಾ ವಿಶೇಷ ಆಯುಕ್ತರು ಯಾವುದೇ ಕಡತದಲ್ಲಿ ಕಾನೂನು ಅಭಿಪ್ರಾಯ ಅವಶ್ಯವಿದೆ ಎಂದು ಭಾವಿಸಿದಲ್ಲಿ ನೇರವಾಗಿ ಕಾನೂನು ಕೋಶದಿಂದ ಪಡೆಯಬಹುದು. ಆದರೆ ಕಾನೂನು ಕೋಶದ ಅಭಿಪ್ರಾಯ ಪಡೆದ ನಂತರ ಬಿಬಿಎಂಪಿಯ ವತಿಯಿಂದ ಅಂತಿಮ ತೀರ್ಮಾನ ಕೈಗೊಳ್ಳುವ ವಿಷಯ ಇದ್ದಲ್ಲಿ ವಿಶೇಷ ಆಯುಕ್ತರು ತಮ್ಮ ಅಭಿಪ್ರಾಯದೊಂದಿಗೆ ಮುಖ್ಯ ಆಯುಕ್ತರ ಅವಗಾಹನೆಗೆ ಹಾಗೂ ಆದೇಶಕ್ಕೆ ಕಡತವನ್ನು ಸಲ್ಲಿಸುವುದು.
7) ವಿಶೇಷ ಆಯುಕ್ತರು ತಮ್ಮ ವಿಷಯ ವ್ಯಾಪ್ತಿಗೆ ಸಂಬಂಧಿಸಿದಂತೆ ಬಿಬಿಎಂಪಿಯ ಯಾವುದೇ ನೌಕರರಿಂದ ವಿವರಣೆ ಪಡೆಯಬಹುದಾಗಿದೆ. ಆದರೆ ಆ ವಿವರಣೆಯ ಆಧಾರದಲ್ಲಿ ಮುಂದಿನ ಶಿಸ್ತಿನ ಕ್ರಮವಹಿಸುವ ಸಂದರ್ಭದಲ್ಲಿ ಮುಖ್ಯ ಆಯುಕ್ತರ ಅನುಮೋದನೆ ಪಡೆಯಬಹುದಾಗಿದೆ. ಅನುಮೋದನೆ ಪಡೆದ ನಂತರ ಶಿಸ್ತಿನ ಕ್ರಮಕ್ಕಾಗಿ ಸಿ.ಸಿ.ಎ ನಿಯಮದಂತೆ, ದೋಷಾರೋಪಣೆ, ದುರ್ನಡತೆಯ ವಿವರ, ಸಾಕ್ಷಿಗಳ ವಿವರ, ಸಂಬಂಧಿತ ದಾಖಲೆಗಳೊಂದಿಗೆ ಪೂರ್ಣ ಕಡತವನ್ನು ವಿಶೇಷ ಆಯುಕ್ತರು (ಆಡಳಿತ) ರವರಿಗೆ ಸಲ್ಲಿಸುವುದು.

GL-04
23/6/22

ಮು.ತಿ.ನೋ...2

CO2
pl. upload website
23/06/2022

8) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಿತದೃಷ್ಟಿಯಿಂದ ಯಾವುದಾದರೂ ಕಾಯಿದೆ ಕಾನೂನಿನಲ್ಲಿ ಬದಲಾವಣೆ ಪ್ರಸ್ತಾಪಿಸಿದಲ್ಲಿ ಅಥವಾ ಈಗಿರುವ ಕಾನೂನು ಕಾಯಿದೆಯಿಂದ ಜನರಿಗೆ ಅನಗತ್ಯ ತೊಂದರೆ ಉಂಟಾಗುತ್ತಿದ್ದಲ್ಲಿ ಈ ಕುರಿತು ವಿಶೇಷ ಆಯುಕ್ತರು, ಕಾನೂನು ಕೋಶದೊಂದಿಗೆ ವಿವರವಾಗಿ ಚರ್ಚಿಸಿ ವಿವರವಾದ ಮತ್ತು ಸ್ಪಷ್ಟವಾದ ತಿದ್ದುಪಡಿ ಪ್ರಸ್ತಾವನೆಯನ್ನು ಮುಖ್ಯ ಆಯುಕ್ತರಿಗೆ ಸಲ್ಲಿಸಬೇಕು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

21-06-22

**ಪ್ರತಿಯನ್ನು:–**

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಎಲ್ಲಾ ವಲಯ ವಲಯ ಆಯುಕ್ತರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ) / (ಆಡಳಿತ) / (ಮಾಹಿತಿ ತಂತ್ರಜ್ಞಾನ) (ಆರೋಗ್ಯ) / (ಹಣಕಾಸು) / (ಕಲ್ಯಾಣ) / (ಮಾರುಕಟ್ಟೆ) / (ಘನ ತ್ಯಾಜ್ಯ ನಿರ್ವಹಣೆ) / (ಆಸ್ತಿಗಳು) / (ಆರೋಗ್ಯ) / (ಕಂದಾಯ) ರವರಿಗೆ ಕಳುಹಿಸಿದೆ.
4. ಎಲ್ಲಾ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
5. ಜಂಟಿ / ಉಪ ಆಯುಕ್ತರು (ಆಡಳಿತ) / (ಕಂದಾಯ) / (ಕಲ್ಯಾಣ) / (ಆರೋಗ್ಯ) / (ಆಸ್ತಿಗಳು) / (ಭೂಸ್ವಾಧೀನ) / (ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ) ರವರಿಗೆ ಕಳುಹಿಸಿದೆ.
6. ಮುಖ್ಯ ಆರೋಗ್ಯಾಧಿಕಾರಿ / ವಲಯ ಆರೋಗ್ಯಾಧಿಕಾರಿಗಳಿಗೆ ಕಳುಹಿಸಿದೆ.
7. ಪ್ರಧಾನ ಅಭಿಯಂತರರಿಗೆ ಕಳುಹಿಸಿದೆ.
8. ಮುಖ್ಯ ಅಭಿಯಂತರರು (ಯೋಜನೆ–ಕೇಂದ್ರ) ರವರಿಗೆ ಕಳುಹಿಸಿದೆ.
9. ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಿದೆ.
10. ಮುಖ್ಯ ಲೆಕ್ಕಾಧಿಕಾರಿಗಳು / ಮುಖ್ಯ ಲೆಕ್ಕಪರಿಶೋಧಕರುರವರಿಗೆ ಕಳುಹಿಸಿದೆ.
11. ಎಲ್ಲಾ ವಲಯ ತೋಟಗಾರಿಕೆ ಅಧೀಕ್ಷಕರುಗಳಿಗೆ ಕಳುಹಿಸಿದೆ.
12. ಉಪ ನಿರ್ದೇಶಕರು (ತೋಟಗಾರಿಕೆ) ರವರಿಗೆ ಕಳುಹಿಸಿದೆ.
13. ಎಲ್ಲಾ ವಲಯ ಸಹಾಯಕ ನಿಯಂತ್ರಕರು (ಹಣಕಾಸು) ರವರುಗಳಿಗೆ ಕಳುಹಿಸಿದೆ.
14. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ದಕ್ಷಿಣ) / (ಪೂರ್ವ) ರವರಿಗೆ ಕಳುಹಿಸಿದೆ.
15. ಎಲ್ಲಾ ಕಂದಾಯ ಅಧಿಕಾರಿಗಳಿಗೆ ಕಳುಹಿಸಿದೆ.
16. ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.
17. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸಿದೆ.
18. ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
19. ಕಛೇರಿ ಪ್ರತಿ.